ಇದ್ದು ಸುಮಾರು ಕೇವಲ ಶೇಕಡಾ 40 ರಷ್ಟು ಹಾಲಿನ ಬೇಡಿಕೆಯನ್ನು ಮಾತ್ರ ಪೂರೈಸಲಾಗುತ್ತಿದೆ. ಹಾಲಿ ಸರಬರಾಜಾಗುತ್ತಿರುವ ಹಾಲಿನ ಸುಮಾರು ಶೇಕಡಾ 40 ಭಾಗ ಅರ್ಧಲೀಟರ್ ಸ್ಯಾಚೆಗಳಲ್ಲಿ ರಾಜ್ಯದ ಎಲ್ಲಾ ಡೈರಿಗಳ ಮೂಲಕ ವಿತರಣೆ ಮಾಡಲಾಗುತ್ತಿದೆ. ಹೆಚ್ಚಿನ ಹಾಲನ್ನು ಅರ್ಧ ಲೀಟರ್ ಸ್ಯಾಚೆಗಳಲ್ಲಿ ತುಂಬಿ ವಿತರಣೆಮಾಡಬೇಕಾಗಿದೆ. ಆದರೆ ಪ್ಯಾಕೆಜಿಂಗ್ ಯಂತ್ರಗಳ ಸಾಮರ್ಥ್ಯ, ಸಂಸ್ಕರಣ ಮತ್ತು ಶೈತ್ಯಾಗಾರ ಸಾಮರ್ಥ್ಯದ ಕಾರಣದಿಂದ ಹಾಲಿ ವಿತರಣೆಯಾಗುತ್ತಿರುವ ಹಾಲಿನ ಪ್ರಮಾಣವನ್ನು ಪೂರೈಸಲು ಕಷ್ಟಕರವಾಗುತ್ತದೆ. ರಾಜ್ಯದ ಗ್ರಾಹಕರ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮದವರ ಕ್ಷೀರಧಾರೆ ಮೂರರ ಯೋಜನೆಯಲ್ಲಿ ರಾಜ್ಯದ ಬಹುತೇಕ ಡೈರಿಗಳ ಎನ್‌ಡಿಡಿಬಿ ಸಂಸ್ಕರಣ ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಿಕೊಂಡಿರುತ್ತೇವೆ. ಯೋಜನೆಯು ಪೂರ್ಣಗೊಂಡ ನಂತರ ಹೆಚ್ಚಿನ ಪ್ರಮಾಣದಲ್ಲಿ ಅರ್ಧ ಲೀಟರ್ ಸ್ಯಾಚೆಟ್ ಹಾಲಿನ ವಿತರಣೆಯನ್ನು ಮಾಡಲಾಗುತ್ತದೆ.

ಹಾಲನ್ನು ಮನೆಗಳಿಗೆ ಸರಬರಾಜು ಮಾಡುವ ನೆಪದಲ್ಲಿ ಹೆಚ್ಚಿನ ಆರ್ಥಿಕ ಲಾಭಕ್ಕೆ ಮಾರಾಟ ಮಾಡುವ ಬಗ್ಗೆ ಎಲ್ಲಾ ಅಧಿಕೃತ ಮಾರಾಟಗಾರರಿಗೆ ಕಡ್ಡಾಯವಾಗಿ ಗ್ರಾಹಕರಿಗೆ ಹಾಲನ್ನು ವಿತರಿಸುವ ಬಗ್ಗೆ ಸೂಚನೆ ಕೊಡಲಾಗಿದೆ. ಆದಾಗ್ಯೂ ಅಧಿಕೃತ ಮಾರಾಟಗಾರರರು ಹೋಟೆಲ್‌ಗೆ ಹಾಲನ್ನು ಸರಬಾರಾಜು ಮಾಡುವುದು ಕಂಡುಬಂದಲ್ಲಿ ಮೊದಲಿಗೆ ಅವರಿಂದ ದಂಡ ವಸೂಲಿ ಆದ ನಂತರ ಅವರ ಅಧಿಕೃತ ಮಾರಾಟದ ಏಜೆನ್ಸಿಯನ್ನು ರದ್ದು ಮಾಡುವ ಕ್ರಮವನ್ನು ಇಟ್ಟುಕೊಂಡಿರುತ್ತೇವೆ. ಈ ಬಗ್ಗೆ ಪುನಃ ಸೂಚನೆಯನ್ನು ಎಲ್ಲಾ ಅಧಿಕೃತ ಮಾರಾಟಗಾರರಿಗೆ ಕೊಡಲಾಗಿದೆ.

ಬೆಂಗಳೂರು ಡೈರಿಯ ಸಂಸ್ಕರಣ ಶೈತ್ಯಾಗಾರ ಸಾಮರ್ಥ್ಯವು ದಿನಂಪ್ರತಿ ಒಂದು ಲಕ್ಷ ಐವತ್ತು ಸಾವಿರ ಲೀಟರ್ ಇದ್ದಾಗ್ಯೂ ಕೂಡ ಪ್ರಸ್ತುತ ಮೂರು ಲಕ್ಷಕ್ಕೂ ಮೀರಿ ಹಾಲನ್ನು ಬೆಂಗಳೂರು ನಗರದ ಗ್ರಾಹಕರಿಗೆ ಸರಬರಾಜು ಮಾಡಲಾಗುತ್ತಿದೆ. ಇದರಲ್ಲಿ ಶೇಕಡಾ 30 ರಷ್ಟು ಅರ್ಧಲೀಟರ್ ಹಾಲಿನ ಪ್ಯಾಕೆಟ್‌ಗಳನ್ನು ದಿನನಿತ್ಯವೂ ಸರಬರಾಜು ಮಾಡುಲಾಗುತ್ತಿದೆ. ಹೆಚ್ಚಿನ ಬೇಡಿಕೆ ಬಂದಲ್ಲಿ ಉತ್ಪಾದನೆಯನ್ನು ಹೆಚ್ಚಿಸಿ ಸರಬರಾಜು ಮಾಡುವ ಯೋಜನೆಯನ್ನು ರೂಪಿಸುತ್ತಿದ್ದೇನೆ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಸೋಮವಾರ ಉತ್ತರ ಹೇಳುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಹೆಚ್. ಯು.ಡಿ. ಮಂತ್ರಿಗಳು ಬಂದಿರುವುದರಿಂದ ಆ ವಿಷಯವನ್ನು ಈಗಲೇ ತೆಗೆದುಕೊಳ್ಳಬಹುದು.

ಶ್ರೀ ಅಜೀಜ್ ಸೇಠ್ : ನಿಯಮ 334ರ ಮೇಲಿನ ಪ್ರಸ್ತಾಪ ಮುಗಿಯಲಿ ಆಮೇಲೆ ತೆಗೆದುಕೊಳ್ಳೋಣ.

ಚಿಕ್ಕಮಗಳೂರು ನಗರಕ್ಕೆ ಒಂದು ಸಂಚಾರಿ ಆರಕ್ಷಕ ಠಾಣೆಯನ್ನು ಮಂಜೂರು ಮಾಡುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್(ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರು ನಗರದಲ್ಲಿ ಜನಸಂಖ್ಯೆ ಬೆಳೆಯುತ್ತಿರುವುದು ಸರಿಯಷ್ಟೆ. ಇದರ ಜೊತೆಗೆ ವಾಹನಗಳ ಸಂಖ್ಯೆಯು ಸಹ ಬಹಳಷ್ಟು ಬೆಳೆದಿದೆ. ಇದಕ್ಕಾಗಿ ಚಿಕ್ಕಮಗಳೂರು ನಗರಸಭೆಯು ಹಾಗೂ ಜಿಲ್ಲಾ ಪೋಲೀಸ್ ಅಧಿಕಾರಿಗಳೂ ಸಹ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಯ ಏನೆಂದರೆ, ನಗರದಲ್ಲಿ ಬೆಳೆಯುತ್ತಿರುವ

ವಾಹನಗಳ ಸಂಚಾರದಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿದೆ. ಆದ್ದರಿಂದ ಚಿಕ್ಕಮಗಳೂರು ನಗರಕ್ಕೆ ಒಂದು ಸಂಚಾರಿ ಆರಕ್ಷಕ ಠಾಣೆಯನ್ನು ಮಂಜೂರ್ಮಾಡಲು ಸರ್ಕಾರ ಯಾವ ತೀರ್ಮಾನ ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾನ್ಯ ಗೃಹ ಮಂತ್ರಿಗಳಿಗೆ ಕೋರುತ್ತೇನೆ.

ಶ್ರೀ ಕೆ.ಜೆ. ಜಾರ್ಜ್(ವಸತಿ ಹಾಗೂ ನಗರಾಭಿವೃದ್ಧಿ ಸಚಿವರು) : ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ಒದಗಿಸುತ್ತೇನೆ.

ಮೂಡಿಗೆರೆ ತಾಲ್ಲೂಕು ಕಳಸಾ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮೂಡಿಗೆರೆ ತಾಲ್ಲೂಕಿನ ಕಳಸಾ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಬಹಳ ಇದ್ದು ಶಾಲಾ ಕಾಲೇಜು ವಿದ್ಯಾರ್ಥಿಗಳ ಪಾಠ ಪ್ರವಚನಕ್ಕೆ ತೊಂದರೆ ಉಂಟಾಗಿ ವಿದ್ಯಾರ್ಥಿಗಳು ಬೀದಿಗಿಳಿಯುವ ಪ್ರಸಂಗ ಉಂಟಾಗಿರುತ್ತದೆ. ಖಾಲಿ ಇರುವ ಹನ್ನೊಂದು ಉಪನ್ಯಾಸಕರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಕಳಸ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸರ್ಕಾರದಿಂದ ಮಂಜೂರಾದ ಉಪನ್ಯಾಸಕರುಗಳ ಹುದ್ದೆಗಳು ಏಳು(7) ಇವುಗಳಲ್ಲಿ ಕನ್ನಡ ಭಾಷಾ ವಿಷಯದ ಉಪನ್ಯಾಸಕರ ಹುದ್ದೆಯನ್ನು ಕೂಡಾ ದಿನಾಂಕ 2-9-1991 ರಂದು ಭರ್ತಿ ಮಾಡಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿರುವ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಚುನಾವಣೆ ನಡೆಸುವುದು.

ಶ್ರೀ ಬಾಬಾಗೌಡರುದ್ರಗೌಡ ಪಾಟೀಲ(ಕಿತ್ತೂರು): ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯಲ್ಲಿರುವ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಆರೇಳು ವರ್ಷಗಳ ಹಿಂದೆ ನಷ್ಟದಲ್ಲಿ ನಡೆಯುತ್ತಿತ್ತು. ನಂತರ ಕರ್ನಾಟಕ ರಾಜ್ಯ ರೈತ ಸಂಘ ಆಡಳಿತ ಮಂಡಳಿಯ ಅವ್ಯವಹಾರವನ್ನು ಎತ್ತಿ ತೋರಿಸಿ ಚಳುವಳಿ ಮಾಡಿ ಅವ್ಯವಹಾರಗಳನ್ನು ತಡೆಯಲು ಯಶಸ್ವಿಯಾಯಿತು. ನಂತರ ಕಾರಖಾನೆ ಲಾಭದಾಯಕವಾಗಿ ನಡೆಯುತ್ತಿದ್ದಾಗ ಎರಡೂವರೆ ವರ್ಷಗಳ ಹಿಂದೆ ಆಗಿನ ಸರ್ಕಾರದವರು ರಾಜಕೀಯ ಮಾಡಿ ಆಡಳಿತ ಮಂಡಳಿಯ ಸದಸ್ಯರಿಗೆ ಯಾವುದೇ ನೋಟೀಸ್ ಕೊಡದೆ ಮಂಡಳಿಯನ್ನು ರದ್ದು ಮಾಡಿದರು. ರೈತರಿಗೆ ಸಿಗಬೇಕಾದ ಲಾಭ ತಪ್ಪಿಹೋಯಿತು. ಈಗಿನ ಸರ್ಕಾರ ಆಡಳಿತಾಧಿಕಾರಿ ಅವಧಿಯನ್ನು ಮತ್ತೆ ಜೂನ್ 1992ರವರೆಗೆ ವಿಸ್ತರಿಸಿದೆ. ಆದ್ದರಿಂದ ಮುಂಬರುವ ಸಹಕಾರಿ ಸಂಘಗಳ ಚುನಾವಣೆ ಕಾಲಕ್ಕೆ ಈ ಕಾರಖಾನೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಸದಿದ್ದಲ್ಲಿ ರೈತರು ಸಹಿಸುವುದಿಲ್ಲ. ಕಾರಣ ಈ ಕೂಡಲೇ ಆಡಳಿತಾಧಿಕಾರಿಯ ಅವಧಿಯನ್ನು ಕೊನೆಗೊಳಿಸಿ ಇನ್ನೆರಡು ತಿಂಗಳಿಗೆ ಬೇರೆ ಸಹಕಾರಿ ಕಾರಖಾನೆಗಳಿಗೆ ಚುನಾವಣೆ ನಡೆಸುವಾಗ ಈ ಕಾರಖಾನೆಗೂ ಚುನಾವಣೆ ಮಾಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)